ಈ ಲೇಖನದ ವಿಷಯಾನುಕ್ರಮಣಿಕೆ


**ಮದುವೆಯ ಸಿದ್ಧತೆ — 2** **2**

**ಮದುವೆಯಲ್ಲಿ ಗಂಡು ಹೆಣ್ಣಿನ ರೂಪದ ಪಾತ್ರ** **5**

**ಹುಡುಗಿಯರಿಗೊಂದು ಕಿವಿಮಾತು** **9**

## ಮದುವೆಯ ಸಿದ್ಧತೆ – 2

ನಮ್ಮ ಮಕ್ಕಳ ದಾಂಪತ್ಯ ಸುಭದ್ರವಾಗಿರಬೇಕಾದರೆ ಮದುವೆಯ ಆಲೋಚನೆ ಮೂಡಿದ ದಿವಸದಿಂದಲೇ ನಾವು ಅನುಸರಿಸಬೇಕಾದ ಸಪ್ತನಿಯಮಗಳನ್ನು ಹಿಂದಿನ ಲೇಖನದಲ್ಲಿ ತಿಳಿದೆವು.

ಆ ಏಳರಲ್ಲಿ ಆರನೆಯ ಹೆಜ್ಜೆಯಾಗಿ ಗಂಡು/ಹೆಣ್ಣನ್ನು ಹುಡುಕಬೇಕಾದರೆ ತಂದೆತಾಯಿಗಳಿಗೆ ಹುಡುಗ ಹುಡುಗಿಯರಿಗೆ ಇರಬೇಕಾದ ಎಚ್ಚರಗಳ ಬಗ್ಗೆ ಈಗ ತಿಳಿಯೋಣ.

ಮೊದಲಿಗೆ ಗಂಡು ಹೆಣ್ಣನ್ನು ನಿರ್ಧರಿಸುವಲ್ಲಿ ಆತುರ ಬೇಡ. ಸರ್ವಥಾ ಆತುರ ಬೇಡ.

ಸಾಮಾನ್ಯವಾಗಿ ಮಗ/ಮಗಳು ದಾರಿ ತಪ್ಪಿದ್ದರೆ, ಅಥವಾ ದಾರಿ ತಪ್ಪುತ್ತಿದ್ದರೆ, ಜವಾಬ್ದಾರಿ

ಬರದಿದ್ದರೆ **“ಮದುವೆ ಮಾಡಿಬಿಡೋಣ ಸರಿಯಾಗುತ್ತೆ”** ಎಂದ ಕೆಲವರು ಮದುವೆ ಮಾಡಿಬಿಡುತ್ತಾರೆ. ಸರಿ ಹೋಗಬಹುದೋ ಇಲ್ಲವೋ, ಆದರೆ ನೀವು (ಅಂಥಾ ಮಕ್ಕಳಿಗೆ ಮದುವೆ ಮಾಡಹೊರಟ ತಂದೆತಾಯಿಗಳು) ಮತ್ತೊಬ್ಬ ವ್ಯಕ್ತಿಯ ಜೀವನದ ಜೊತೆ, ಮತ್ತೊಂದು ಕುಟುಂಬದ ಮರ್ಯಾದೆಯ ಜೊತೆ ಆಟವಾಡುತ್ತಿರುವದು ಮಾತ್ರ ನೂರಕ್ಕೆ ನೂರು ಸತ್ಯ.

ತಪ್ಪು ಮಾಡಿದ ಕಾರಣಕ್ಕೆ ಮಕ್ಕಳು ತೋರಿಸಿದ ವ್ಯಕ್ತಿಯ ಜೊತೆಯಲ್ಲಿ ಮದುವೆಗೆ ಸಿದ್ಧವಾಗಿರುತ್ತಾರೆ. ಅದರೆ ಅವರ ಮನಸ್ಸಿನಲ್ಲಿ ಸಂಗಾತಿಯೆಡೆಗೆ ಪ್ರೀತಿಯೇ ಮೂಡಿರುವದಿಲ್ಲ. ಪ್ರೀತಿ ನೀಡದ ಸಂಗಾತಿಯ ಜೊತೆ ಬದುಕುವದಕ್ಕಿಂತ ದೊಡ್ಡ ಶಿಕ್ಷೆ ಈ ಜಗತ್ತಿನಲ್ಲಿ ಮತ್ತೊಂದಿಲ್ಲ. ಅದನ್ನು ವೃಥಾ ಮತ್ತೊಬ್ಬ ವ್ಯಕ್ತಿ ಅನುಭವಿಸಬೇಕು. ಆಮೇಲೆ, ಹೊಂದಿಕೊಂಡು ಹೋಗು ಎಂಬ ಉಪದೇಶಗಳು, ಸರಿಹೋಗುತ್ತೆ ಎಂಬ ಸುಳ್ಳು ಭರವಸೆಗಳೂ, ಯಾವುದೂ ಆಗದಾಗ ವಿಚ್ಛೇದನಗಳು.

ಮಾಡಬೇಡಿ, ದಯವಿಟ್ಟು ಹೀಗೆ ಮಾಡಬೇಡಿ. ಮಕ್ಕಳು ದಾರಿತಪ್ಪಿದ್ದರೆ ಮೊದಲಿಗೆ ಅವರನ್ನು ತಿದ್ದಿ ಅವರ ತಪ್ಪು ಮನವರಿಕೆಯಾಗಲಿಕ್ಕೆ ಒಂದಷ್ಟು ಸಮಯ ನೀಡಿ.

ನಮ್ಮ ಸಂಸ್ಕೃತದಲ್ಲಿ ಒಂದು ಮಾತಿದೆ —

**ಕನ್ಯಾ ವರಯತೇ ರೂಪಂ**
**ಮಾತಾ ವಿತ್ತಂ ಪಿತಾ ಗುಣಮ್ (ಶ್ರುತಮ್) ।**
**ಬಾಂಧವಾಃ ಕುಲಮಿಚ್ಛಂತಿ**
**ಮೃಷ್ಟಾನ್ನಮಿತರೇ ಜನಾಃ ॥**

ಈ ಶ್ಲೋಕಕ್ಕೊಂದು ಹಾಸ್ಯದ ಆಯಾಮವಿದೆ. ಮುಂದೆ ಯಾವುದಾದರೂ ಒಂದು ಉಪನ್ಯಾಸದಲ್ಲಿ ಸಂದರ್ಭ ಬಂದರೆ ವಿವರಿಸುತ್ತೇನೆ. ಲೇಖನದ ಕೊನೆಯಲ್ಲಿ ಸ್ವಲ್ಪ ಆ ಹಾಸ್ಯದ ಮುಖವನ್ನು ಸ್ಪರ್ಶ ಮಾಡುತ್ತೇನೆ.

ಈಗ ಈ ಶ್ಲೋಕ ತಿಳಿಸುವ ಮಹತ್ತ್ವದ ವಿಷಯಗಳ ಕುರಿತು ನಾವು ಚರ್ಚೆ ಮಾಡೋಣ.

ಗಂಡು/ಹೆಣ್ಣು ನಿರ್ಧರಿಸುವಾಗ ಯಾರ ಪಾತ್ರ ಎಷ್ಟು ಮಹತ್ತ್ವದ್ದು ಎನ್ನುವದನ್ನು ಈ ಶ್ಲೋಕ ತಿಳಿಸುತ್ತದೆ.

## ಮದುವೆಯಲ್ಲಿ ಗಂಡು ಹೆಣ್ಣಿನ ರೂಪದ ಪಾತ್ರ

ಮೊದಲಿಗೆ ಗಂಡಿನ/ಹೆಣ್ಣಿನ ರೂಪ. ರೂಪ ಮಹತ್ತ್ವದ್ದಲ್ಲ, ಗುಣವೇ ಮಹತ್ತ್ವದ್ದು ಎನ್ನುವದರಲ್ಲಿ ಎರಡು ಮಾತಿಲ್ಲ. ಗುಣವಿಲ್ಲದ ರೂಪ ಪ್ರಾಣ ಹೋದ ಶರೀರ. ಅದರಿಂದ ಯಾವ ಉಪಯೋಗವೂ ಇಲ್ಲ. ಆದರೆ ಗುಣದ ಜೊತೆ ರೂಪವೂ ಇದ್ದರೆ ಬಂಗಾರಕ್ಕೆ ಪರಿಮಳ ಬಂದಂತೆ.

ಹೀಗಾಗಿ ರೂಪಕ್ಕೆ ಬೆಲೆ ನೀಡಬಾರದು ಎಂದು ಸರ್ವಥಾ ಅರ್ಥವಲ್ಲ. ಗಂಡ ಹೆಂಡತಿ ಇಡಿಯ ಜೀವನ ಕೂಡಿ ಬದುಕಬೇಕಾಗಿದೆ. ಒಬ್ಬರನ್ನೊಬ್ಬರು ಪ್ರೀತಿಸುತ್ತ ಬದುಕಬೇಕಾಗಿದೆ. ಪ್ರೀತಿ ಅಂಕುರ ಒಡೆಯಲು ಇರುವ ಹತ್ತಾರು ಕಾರಣಗಳಲ್ಲಿ ರೂಪವೂ ಒಂದು.

ಹೀಗಾಗಿ, ಗಂಡಿಗೆ ಹೆಣ್ಣು ಇಷ್ಟವಾಗಬೇಕು. ಹೆಣ್ಣಿಗೆ ಗಂಡು ಇಷ್ಟವಾಗಬೇಕು. ಒಬ್ಬರ ರೂಪ ಮತ್ತೊಬ್ಬರಿಗೆ ಇಷ್ಟವಾಗಲಿಲ್ಲ ಎಂತಾದಲ್ಲಿ

ತಂದೆತಾಯಿಗಳು ಖಂಡಿತ ಆ ಮದುವೆಗೆ ಮಂದಾಗಬೇಡಿ. ಪ್ರತಿಯೊಬ್ಬ ಜೀವಿಯೂ ವಿಭಿನ್ನ, ಪ್ರತಿಯೊಬ್ಬನ ಆಲೋಚನೆಯ ವಿಧಾನವೂ ವಿಭಿನ್ನ. ತಂದೆ ತಾಯಿಗಳಿಗೆ ಹುಡುಗನ ರೂಪ ಇಷ್ಟವಾಗಿರಬಹುದು, ಏನು ಕೊರತೆ ಅಂತ ಅನಿಸಿರಬಹುದು. ಆದರೆ, ಹುಡುಗಿಗೆ ಇಷ್ಟವಾಗಿಲ್ಲ, ಅಥವಾ ಮಗನಿಗೆ ಆ ಹುಡುಗಿಯ ರೂಪ ಇಷ್ಟವಾಗದಿದ್ದಲ್ಲಿ ಮದುವೆ ಮಾಡಿ ಉಪಯೋಗವಿಲ್ಲ.

ಹೀಗಾಗಿ ಕನ್ಯಾ ವರಯತೇ ರೂಪಮ್, ಗಂಡು/ ಹೆಣ್ಣಿನ ರೂಪವನ್ನು ಮದುವಯಾಗುವ ಹೆಣ್ಣು/ ಗಂಡೇ ಮಾಡಬೇಕು. ಹಿಂದೆ ಕ್ಷತ್ರಿಯರಲ್ಲಿ ಸ್ವಯಂವರದ ಪದ್ಧತಿಯಿದ್ದದ್ದೂ ಇದೇ ಕಾರಣಕ್ಕೆ. ಹುಡುಗಿಯೇ ಹುಡುಗನನ್ನು ಆರಿಸಬೇಕು. ಮತ್ತು ಹುಡುಗನನ್ನು ಸಂಗಾತಿಯಾಗಿ ಆರಿಸುವಲ್ಲಿ ಅವಳ ಅಂತಃಪ್ರಜ್ಞೆ ತುಂಬ ಜಾಗೃತವಾಗಿ ಕೆಲಸ ಮಾಡುತ್ತದೆ. ಹೀಗಾಗಿ ಅವಳಿಗೆ ಸಾಕಷ್ಟು ಸಮಯ ಕೊಟ್ಟು ನಿರ್ಧಾರ ಮಾಡು ಎಂದು ಹೇಳತಕ್ಕದ್ದು.

ಮತ್ತು, ನೋಟ ಪರರಿಚ್ಚೆ. ಪ್ರತಿಯೊಬ್ಬರಿಗೂ ತನ್ನ ಸಂಗಾತಿ ಹೀಗಿರಬೇಕು ಎಂದು ಬಯಸುವ ಅಧಿಕಾರವಿದೆ. ಹೆಣ್ಣುಮಕ್ಕಳಿಗಂತೂ ತಮ್ಮ ರೂಪವಷ್ಟೇ ಅಲ್ಲ, ತಮ್ಮ ಪತಿಯ ಮಕ್ಕಳ ಸೌಂದರ್ಯ ಆರೋಗ್ಯದ ಕುರಿತೂ ಸಹ ತುಂಬ ಕಾಳಜಿಯಿರುತ್ತದೆ. ಅವಳು ಬಯಸುವ ವ್ಯಕ್ತಿ ಅವಳ ಸಂಗಾತಿಯಾಗಬೇಕೇ ಹೊರತು, ಮತ್ತೊಬ್ಬರಲ್ಲ. ಯಾವುದೇ ಕಾರಣಕ್ಕೂ ಒಲ್ಲದ ವ್ಯಕ್ತಿಯ ಜೊತೆ ಮದುವೆ ಮಾಡಲು ಮುಂದಾಗಬೇಡಿ. ನಿಮಗೆ ಮೊಸರು ಇಷ್ಟವಿಲ್ಲ ಎಂದಿಟ್ಟುಕೊಳ್ಳೋಣ. ಅದನ್ನು ನೋಡಿದರೇ ನಿಮಗೆ ವಾಕರಿಕೆ ಬರುತ್ತದೆ. ಅಂತಹುದರಲ್ಲಿ ಮನೆಯವರೆಲ್ಲ ಹೇಳಿದರು ಎನ್ನುವ ಕಾರಣಕ್ಕೆ ನೀವು ಮೊಸರು ತಿನ್ನುತ್ತೀರಾ? ಬಲವಂತವಾಗಿ ತಿಂದರೆ ಅದು ಅಸಹ್ಯಪಟ್ಟುಕೊಳ್ಳುವ ರೀತಿಯಲ್ಲಿ ಹೊರಬರುತ್ತದೆ.

ಹೀಗಾಗಿ, ತಂದೆತಾಯಿಯಾದವರು ಮಗಳನ್ನು ಕೂಡಿಸಿಕೊಂಡು ಕೇಳಿ. ನಿನಗೆಂತಹ ಹುಡುಗ ಬೇಕು ಎಂದು. ಅವಳದೇ ಆದ ಒಂದು ಕನಸಿರುತ್ತದೆ.

ಅದರಲ್ಲಿ ತಪ್ಪಿದ್ದರೆ, ದಡ್ಡತನವಿದ್ದರೆ ಅದನ್ನು ತಿದ್ದಿ[1]. ಮುಖ್ಯವಾಗಿ ತಾಯಿಯಾದವಳು ಮಗಳ ಜೊತೆಯಲ್ಲಿ ಕುಳಿತು ಮಾತನಾಡುತ್ತ — ಮತ್ತೊಬ್ಬರ ದೃಷ್ಟಾಂತವನ್ನು 'ಆಡಿಕೊಳ್ಳುವದಕ್ಕಾಗಿ' ಅಲ್ಲ ಪಾಠ ಕಲಿಯುವದಕ್ಕಾಗಿ ಅವಳಿಗೆ ನೀಡುತ್ತ — ಅವಳ ಮನಸ್ಸಿನ ಮಾತುಗಳನ್ನು ಅರಿಯಲು ಪ್ರಯತ್ನಿಸಬೇಕು. ಕೆಲವು ಬಾರಿ ಅವಳ ಮನಸ್ಸಿನಲ್ಲಿಯೂ ಭವಿಷ್ಯದ ಚಿತ್ರ ಅಸ್ಪಷ್ಟವಾಗಿರುತ್ತದೆ. ಅದನ್ನು ಸ್ಪಷ್ಟಪಡಿಸಬೇಕು. ಅವಳ ಮನಸ್ಸಿನ ರಾಜಕುಮಾರ ಹೇಗಿದ್ದಾನೆ ಎನ್ನುವದನ್ನು ಅರಿತು ಮದುವೆಗೆ ಮುಂದುವರೆಯಬೇಕು.

**ರೂಪ ಪ್ರಧಾನವಲ್ಲ ನಿಜ, ಅದರೆ ಖಂಡಿತ ನಗಣ್ಯವಲ್ಲ.** ಅವಳಾಗಿಯೇ ಒಬ್ಬ ರೂಪವಿಲ್ಲದವನನ್ನೂ ಗುಣಕ್ಕೆ ಮೆಚ್ಚಿ

---

[1] ನನ್ನ ಪರಿಚಯದ ಹುಡುಗಿಯೊಬ್ಬಳು ಮದುವೆಯಾದರೆ ಸಲ್ಮಾನ್ ಖಾನನನ್ನೇ ಆಗೋದು ಅಂತ ಕುಳಿತಿದ್ದಳು. ಜಗತ್ತಿನ ವಾಸ್ತವಿಕತೆಯ ಪರಿಚಯವಿಲ್ಲದೇ, ಭ್ರಮೆಯ ಲೋಕದಲ್ಲಿ ಬದುಕುತ್ತಿದ್ದ ಹುಡುಗಿ. ಅವನು ವ್ಯಕ್ತಿಯೊಬ್ಬನ ಮೇಲೆ ಕಾರು ಹತ್ತಿಸಿದ ಪ್ರಸಂಗವಾದ ಮೇಲೆ ಅವಳು ಭ್ರಮೆಯ ಲೋಕದಿಂದ ಹೊರಬಂದಳು.

ಮದುವೆಯಾಗಲು ಸಿದ್ಧವಿದ್ದರೆ ಖಂಡಿತ ಮುಂದಾಗಿ. ಹಾಗೆಂದು ಅವಳಿಗಿಷ್ಟವಿಲ್ಲದಿದ್ದರೂ ಕುರೂಪಿಯನ್ನು ಮದುವೆಯಾಗಲು ಒತ್ತಾಯಿಸಬೇಡಿ.

## ಹುಡುಗಿಯರಿಗೊಂದು ಕಿವಿಮಾತು

ಇವಿಷ್ಟು ತಂದೆತಾಯಿಗಳ ಆಯಾಮದಿಂದ ಯೋಚಿಸಿದ್ದಾಯಿತು. ಇನ್ನು ಹುಡುಗಿಯರಿಗೊಂದಷ್ಟು ಬುದ್ಧಿಮಾತು.

ಹೆಣ್ಣು ಎನ್ನುವದು ಪರಮಾತ್ಮನ ಸುಂದರ ಸೃಷ್ಟಿ. ಕೋಮಲತೆಯ ಸೌಂದರ್ಯವನ್ನು ಪರಮಾತ್ಮ ಹೆಣ್ಣಿನಲ್ಲಿಟ್ಟು ಕಳುಹಿಸಿದ್ದಾನೆ. ನಿಮಗೆ ನಿಮ್ಮದೇ ಆದ ಚೆಲುವಿನ ರೂಪವಿರುತ್ತದೆ. ಆ ರೂಪವಿರುವದಕ್ಕಾಗಿ ನಿಮಗೆ ಹೆಮ್ಮೆಯಿರಲಿ. ಅಹಂಕಾರ ಬೇಡ, ದುರಹಂಕಾರ ಬೇಡ. ಯಾವುದು ಮಹಾ ಗುಣವೂ ದುರಹಂಕಾರದ ಜೊತೆಯಲ್ಲಿದ್ದರೆ ವಿಷಸೇರಿದ ಅಮೃತವಾಗಿಬಿಡುತ್ತದೆ. ಈ ಜಗತ್ತಿನಲ್ಲಿ ಅದೆಷ್ಟು ಜನ ಅದೆಷ್ಟು ರೀತಿಯಲ್ಲಿ ದುರಹಂಕಾರ

ತೋರಿದ್ದಾರೆಯೋ ಅಷ್ಟೇ ರೀತಿಯಲ್ಲಿ ಅವರು ವಿನಾಶವಾಗುತ್ತಾರೆ.

ಹೆಣ್ಣು ಹೂವಿನಂತೆ, ಲತೆಯಂತೆ. ಆ ಹೂ ಲತೆಗಳಿಗೆ ಒಂದು ಆಧಾರವಿದ್ದರೆ ಮಾತ್ರ ಅವು ಬೆಳೆಯಲು ಸಾಧ್ಯ, ಉಳಿಯಲು ಸಾಧ್ಯ[2]. ಹೀಗಾಗಿ, ನಿಮ್ಮ ರೂಪದಿಂದ ಗಂಡನ್ನು ಅಳೆಯತಕ್ಕದ್ದಲ್ಲ. ಗಂಡನ್ನು ಆರಿಸಬೇಕಾದರೆ ನಿಮ್ಮ ಚೆಲುವಿಗೆ ಆಸರೆಯಾಗಬಲ್ಲ ಹುಡುಗನನ್ನು, ಚೆಲುವಿರುವ ನಿಮ್ಮ ಮುಖದಲ್ಲಿ ಸದಾ ಮಂದಹಾಸವನ್ನು ಮೂಡಿಸಬಲ್ಲ ಹುಡುಗನನ್ನು, ನೀವು ಮುದುಕಿಯಾಗಿ ರೂಪ ಕಳೆದುಕೊಂಡಾಗಲೂ ನನ್ನ ಮುದ್ದು ಹೆಂಡತಿ ನೀನು ಎಂದು ಮುದ್ದಿಸಬಲ್ಲ ವ್ಯಕ್ತಿತ್ವದ ಹುಡುಗನನ್ನು ಆರಿಸಬೇಕು. ಸಣ್ಣ ವಯಸ್ಸಿನ ನಮಗೆ  ಇದು ಹೇಗೆ ಗೊತ್ತಾಗಲು ಸಾಧ್ಯ ಎಂದು ನೀವು ಪ್ರಶ್ನಿಸಬಹುದು, ಉತ್ತರಕ್ಕಾಗಿ ಮುಂದಿನ ಲೇಖನಗಳನ್ನು ಓದಿ.

---

[2] ನಾನು ಇಲ್ಲಿ ರೂಪದ ದೃಷ್ಟಿಕೋಣದಿಂದ ಮಾತ್ರ ಮಾತನಾಡುತ್ತಿದ್ದೇನೆ, ತಪ್ಪು ಮಾಡಿದ ಗಂಡಿನ ಅಡಿಯಾಳಾಗಿ ಬದುಕಿ ಎಂಬ ಮಾತನ್ನು ಹೇಳುತ್ತಿಲ್ಲ.

ಇಲ್ಲಿ ಹುಡುಗಿ, ಹುಡುಗನ ರೂಪವನ್ನು ನಿರ್ಧರಿಸಬೇಕು, ಅಳೆಯಬೇಕು ಎಂದಿದೆ. ಹುಡುಗ ಹುಡುಗಿಯನ್ನು ಆರಿಸಬೇಕು ಎಂದಲ್ಲ. ಕಾರಣ ಏನು ಗೊತ್ತಾ, ಹೆಣ್ಣಿನಲ್ಲಿ ಸಹಜವಾಗಿ ಇರುವ ಮಮತೆ ವಾತ್ಸಲ್ಯಗಳು ಅವಳ ಎಲ್ಲ ಸೌಂದರ್ಯಕ್ಕಿಂತ ದೊಡ್ಡದು. ಒಬ್ಬ ಗಂಡನಿಗೆ ಹೆಂಡತಿಯಾಗಿ, ಆತ್ಮೀಯ ಗೆಳತಿಯಾಗಿ, ವಾತ್ಸಲ್ಯದ ತಾಯಿಯಾಗಿ, ಸಲಹೆಗಾರ್ತಿಯಾಗಿ, ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಅವನ ಎಲ್ಲ ಸಾಧನೆಯ ಸ್ಫೂರ್ತಿಗೆ ಶಕ್ತಿಯಾಗಿ ನಿಲ್ಲುತ್ತಾಳೆ. ಜೀವನದಲ್ಲಿ ದೊಡ್ಡ ಕನಸು ಹೊತ್ತ ಜವಾಬ್ದಾರಿಯುತ ತಾನು ಮದುವೆಯಾಗುವ ಹುಡುಗಿಯಲ್ಲಿ ಆ ಗುಣಗಳನ್ನು ಹುಡುಕುತ್ತಿರುತ್ತಾನೆ. **ರೂಪವನ್ನಷ್ಟೇ ನೋಡಿ ಮದುವೆಯಾಗುವ ಗಂಡು ಇನ್ನೂ ಮೊದಲನೆಯ ವರ್ಷದ ಸಂಭ್ರಮ ಮುಗಿಯುವಷ್ಟರಲ್ಲಿ ಅವಳಲ್ಲಿ ಆಸಕ್ತಿ ಕಳೆದುಕೊಂಡುಬಿಡುತ್ತಾನೆ. ಹೀಗಾಗಿ ಕೇವಲ ರೂಪವನ್ನು ನೋಡಿ ಮದುವೆಯಾಗುವ ಗಂಡು ಪರಮದಡ್ಡ, ಸಂಶಯವಿಲ್ಲ.**

ಮದುವೆಯ ಮನೆಯಲ್ಲಿ ಯಾವಾಗಲೂ ನಗು ತುಂಬಿರಬೇಕಂತೆ, ನಾವೂ ಮದುವೆಯ ಬಗ್ಗೆ ಮಾತಾಡುತ್ತಿದ್ದೇವೆ, ಹೀಗಾಗಿ ಹಾಸ್ಯದೊಂದಿಗೆ ಲೇಖನಗಳನ್ನು ಮುಗಿಸುತ್ತೇನೆ —

ಇಲ್ಲಿ "ಕನ್ಯಾ ವರಯತೇ ರೂಪಮ್" ಎಂದಿದೆ, ಹುಡುಗಿ ಹುಡುಗನ ರೂಪವನ್ನು ನಿರ್ಧರಿಸಬೇಕು, ಎಂದು. "ವರೋ ವರಯತೇ ರೂಪಮ್" ಅಂತ ಯಾಕೆ ಹೇಳಲಿಲ್ಲ ಅಂತಾ? ಹುಡುಗಿ ಹೇಗಿದ್ದರೂ ಮದುವೆಗೆ ಒಪ್ಪಿದರೆ ಸಾಕು ಅಂತ ಹುಡುಗರು ಕಾಯ್ತಿರ್ತಾರೆ ಅಂತಾನಾ?

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491